ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಮಾನ್ಯ ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER : ವಿಶ್ವವಾಣಿ

ದಿನಾಂಕ : DATE : 04/07/2019

ಸಮಯ ಇದ್ದರೆ ರಾಜ್ಯಪಾಲರಲ್ಲ, ರಾಷ್ಟ್ರಪತಿಗಳಿಗೂ ರಾಜೀನಾಮೆ ರವಾನಿಸಲಿ

# ರಾಜೀನಾಮೆ ಹೇಗೆ ನೀಡಬೇಕೆಂದು ತಿಳಿದಿರಬೇಕು: ರಮೇಶ್ ಕುಮಾರ್

4/7/19

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ರಾಜೀನಾಮೆ ನೀಡಿರುವ ಇಬ್ಬರು ಶಾಸಕರು ಒಂದೊಂದು ಹೇಳಿಕೆ ನೀಡುತ್ತಿರುವುದಕ್ಕೆ, ವಿಧಾನಸಭಾ ಸಭಾಧ್ಯಕ್ಷ ರಮೇಶ್ ಕುಮಾರ್ ಸಿಡಿಮಿಡಿಗೊಂಡಿದ್ದು, ಶಾಸಕರಾದವರು ರಾಜೀನಾಮೆ ನೀಡುವುದು ಹೇಗೆ ಎನ್ನುವುದು ತಿಳಿದಿರಬೇಕೆಂದು ವಾಗ್ದಾಳಿ ನಡೆಸಿದ್ದಾರೆ.



ಮಂಗಳವಾರ ರಮೇಶ್ ಜಾರಕಿಹೊಳಿ ಅವರು ಫ್ಯಾಕ್ಸ್ ಮೂಲಕ ರಾಜೀನಾಮೆ ರವಾನಿಸಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿ, ನಾನು ಪೋಸ್ಟಲ್ ಇಲಾಖೆಯಲ್ಲಿಲ್ಲವೆಂದಿದ್ದ ರಮೇಶ್ ಕುಮಾರ್ ಬುಧವಾರ ಆನಂದ್‌ಸಿಂಗ್ ಹಾಗೂ ರಮೇಶ್ ಜಾರಕಿಹೊಳಿ ಅವರ ನಡವಳಿಕೆ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಶಾಸಕರಾದವರಿಗೆ ಯಾರಿಗೆ ರಾಜೀನಾಮೆ ಕೊಡಬೇಕೆಂಬ ಅರಿವಿರಬೇಕು. ನನಗೆ ಪರಮಾಧಿಕಾರ ಇಲ್ಲ, ಆದರೆ ಜವಾಬ್ದಾರಿ ಇದೆ. ಶಾಸಕರಾದವರಿಗೆ ರಾಜೀನಾಮೆ ಯಾರಿಗೆ ಕೊಡಬೇಕು ಹೇಗೆ ಕೊಡಬೇಕು ಎಂಬ ಅರಿವು ಇರಬೇಕು. ವಿಧಾಸಭಾಧ್ಯಕ್ಷರನ್ನು ಬಿಟ್ಟು ಯಾರಿಗಾದರೂ ರಾಜೀನಾಮೆ ಪತ್ರ ಕೊಟ್ಟರೆ ಅದು ನನಗೆ ಸಂಬಂಧವಿಲ್ಲ. ಅವರು ಬೇಕಾದರೆ ರಾಷ್ಟ್ರಪತಿಗೂ ಕೊಡಲಿ ಎಂದು ಕಿಡಿಕಾರಿದರು.

## ಕಾನೂನು ವ್ಯಾಪ್ತಿಯಲ್ಲಿ ಕ್ರಮ

ಕಾನೂನು ವ್ಯಾಪ್ತಿಯಲ್ಲಿ ನಾನು ತೀರ್ಮಾನ ಮಾಡುತ್ತೇನೆ. ರಾಜೀನಾಮೆ ಪತ್ರ ಯಾರಿಗೆ ಕೊಡಬೇಕು ಎಂಬ ಅರಿವಿದ್ದರೂ, ಈ ರೀತಿ ಮಾಡಿದರೆ ಅದರ ಹಿಂದೆ ಬೇರೆ ಉದ್ದೇಶ ಇದೆ ಎಂದು ಅರ್ಥ. ಅದರ ತಿಳವಳಿಕೆ ಇಲ್ಲವಾದರೆ ನಮ್ಮ ಹಣೆಬರಹ ಹೀಗಾಗಿದೆ ಅಂದುಕೊಳ್ಳಬೇಕು ಎಂದು ವ್ಯಂಗ್ಯವಾಡಿದರು.

ಇಲ್ಲಿಯವರೆಗೆ ಆನಂದ್‌ಸಿಂಗ್ ಒಬ್ಬರ ರಾಜೀನಾಮೆ ಪತ್ರ ತಲುಪಿದೆ. ಈ ಬಗ್ಗೆ ರಾಜ್ಯದ ಯಾವುದೇ ಪ್ರಜೆ ಆಕ್ಷೇಪ ಎತ್ತಲು ಅವಕಾಶ ಇದೆ. ಇದುವರೆಗೂ ಯಾರಿಂದಲೂ ಆಕ್ಷೇಪ ಬಂದಿಲ್ಲ.

ಜನರಿಗೆ ಶಾಸಕರ ವರ್ತನೆ ಇಷ್ಟ ಆಗದಿದ್ದಲ್ಲಿ ಅವರನ್ನು ತಿರಸ್ಕರಿಸುವ ಅವಕಾಶ ಸಂವಿಧಾನದಲ್ಲಿ ಇಲ್ಲ.

ಇಂಥ ಸಂದರ್ಭದಲ್ಲಿ ಸಾರ್ವಜನಿಕರ ಅಭಿಪ್ರಾಯ ಕೇಳಬೇಕಾಗಿದೆ. ಸಾರ್ವಜನಿಕರು ಯಾರು ಬೇಕಾದರು ಶಾಸಕರ ಬಗ್ಗೆ ದೂರು ನೀಡಬಹುದು ಎಂದು ಸ್ಪಷ್ಟಪಡಿಸಿದರು.